ಶಿವಾಜಿನಗರ ಕ್ಷೇತ್ರದಲ್ಲಿರುವ ವೈನ್ ಶಾಪ್‌ಗಳ ಕುರಿತು

1822 (2176) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ):

ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬೆಂಗಳೂರಿನ ಶಿವಾಜಿನಗರ ವಿಧಾನಸಭೆ ಕ್ಷೇತ್ರದಲ್ಲಿರುವ ಒಟ್ಟು ವೈನ್ ಶಾಪ್‌ಗಳ ಸಂಖ್ಯೆ ಎಷ್ಟು;

(ಆ) ಈ ಕ್ಷೇತ್ರದಲ್ಲಿ ಆರ್ಯಾಕ್ ಶಾಪ್‌ಗಳೆಷ್ಟು;

(ಇ) 1999-2000ನೇ ಸಾಲಿನಲ್ಲಿ ಹೊಸದಾಗಿ ಎಷ್ಟು ವೈನ್ ಶಾಪ್‌ಗಳಿಗೆ ಲೈಸೆನ್ಸ್ ನೀಡಲಾಗಿದೆ;

(ಈ) ಈ ಅವಧಿಯಲ್ಲಿ ಎಷ್ಟು ವೈನ್ ಶಾಪ್‌ಗಳನ್ನು ನವೀಕರಿಸಲಾಗಿದೆ;

(ಉ) ಈ ಕ್ಷೇತ್ರದಲ್ಲಿರುವ ವೈನ್ ಶಾಪ್‌ಗಳನ್ನು ಮುಚ್ಚಲು ಸಾರ್ವಜನಿಕರಿಂದ ದೂರುಗಳು ಬಂದಿವೆ;

(ಊ) ಅವುಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು)

(ಅ) ಬೆಂಗಳೂರಿನ ಶಿವಾಜಿನಗರದ ವಿಧಾನಸಭಾ ಕ್ಷೇತ್ರದಲ್ಲಿರುವ ಒಟ್ಟು ವೈನ್ ಶಾಪ್‌ಗಳು 40.

(ಆ) ಈ ಕ್ಷೇತ್ರದಲ್ಲಿರುವ ಸಾರಾಯಿ ಅಂಗಡಿಗಳು - 5

(ಇ) ಇಲ್ಲ.

(ಈ) ಪ್ರಶ್ನೆ (ಅ) ರಲ್ಲಿ ನೀಡಲಾದ ಮಾಹಿತಿ ಈ ಪ್ರಶ್ನೆಗೂ ಅನ್ವಯಿಸುತ್ತದೆ.

(ಉ) ವೈನ್ ಶಾಪ್‌ಗಳ ಮೇಲೆ ಯಾವುದೇ ದೂರುಗಳು ಇರುವುದಿಲ್ಲ. ಆದರೆ ಸಾರಾಯಿ ಅಂಗಡಿ ಮೇಲೆ ಒಂದು ದೂರು ಅರ್ಜಿ ಬಂದಿದೆ.

(ಊ) ಕಾನೂನಿನ ಅನ್ವಯ ಕ್ರಮ ಜರುಗಿಸಲಾಗುತ್ತಿದೆ.

ಬೈಲಹೊಂಗಲ ತಾಲ್ಲೂಕು ನೇಸರಗಿಯಲ್ಲಿ 33 ಕೆ.ವಿ. ಸ್ಟೇಷನ್ ನಿರ್ಮಿಸುವ ಕುರಿತು

1824 (2168) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ):

ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?